

# ಸೋತ ರೆಕ್ಕೆಗೆ ದೊರಕಲಿ ಶಕ್ತಿ ಕಳೆಗುಂದದಿರಲಿ ನೈತಿಕ ಶಕ್ತಿ

**ಮುಂಬರುವ ವರ್ಷದ ಕನಸುಗಳಿಗೆ ದೂರ ಪಯಣದ ರೆಕ್ಕೆಗಳಿಗಿಂತ ನಿಂತಲ್ಲೇ ಆಳಕ್ಕೆ ಬೇರಿಳಿಸುವ ಬದ್ಧತೆ ಮುಖ್ಯ.**



■ **ಶಿವಾನಂದ ಕಳವೆ**
**ಬರಹಗಾರ, ಕೃಷಿ-ಪರಿಸರ ಕಾಯಕರ್ತ**

ಕಾಫೀ ಹಣ್ಣು ಕೊಯ್ಲು ಮುಗಿದ ಬಳಿಕ ಸೋತರೆಕ್ಕೆಗಳನ್ನು (ಫಲ ನೀಡಿದ ಟೊಂಗೆಗಳನ್ನು) ಕತ್ತರಿಸಲಾಗುತ್ತದೆ. ಫಲ ನೀಡಿದ ವರ್ಷದ ಟೊಂಗೆ ಕಡಿದರಷ್ಟೇ ಮುಂದಿನ ವರ್ಷಕ್ಕೆ ಹೊಸ ರೆಕ್ಕೆ ಚಿಗುರಿ ಹೂ ಕಚ್ಚಿ ಇಳುವರಿ ಹೆಚ್ಚುತ್ತದೆ. ಕೊರೊನಾ ಕಾರಣಕ್ಕೆ ಇಡೀ ಮಾನವಲೋಕದ ಓಟದ ಚಕ್ರ ವರ್ಷದಿಂದ ನಿಂತು ಕೊರಗಿ ಮತ್ತೆ ಹೊರಡುತ್ತಿದೆ. ಹೊಸ ಚಕ್ರ ಜೋಡಿಸುವ ತಯಾರಿಯಲ್ಲಿರುವ ಹೊತ್ತಿಗೆ ಕೊರೊನಾ ವೈರಸ್‌ನ ಇನ್ನೊಂದು ರೂಪದ ಪ್ರಚಾರವೂ ಶುರುವಾಗಿದೆ. ಮಾಸ್ಕ್ ಹಾಕಿಕೊಂಡು ಸ್ಯಾನಿಟೈಸರ್‌ನಲ್ಲಿ ಕೈ ತೊಳೆಯುತ್ತ ಕಾಲ ನೂಕಿದ ಬಳಿಕ ಎದುರು ಬಂದವರ ಹತ್ತಿರದಲ್ಲಿ ಸಲೀಸಾಗಿ ನಿಲ್ಲುವ ಧೈರ್ಯ ಇನ್ನೂ ಬಂದಿಲ್ಲ. ಆರೋಗ್ಯದ ಕಾಳಜಿಯೊಂದು ಎಲ್ಲರಲ್ಲಿ ಆಯುಷ್ಯದ ಪ್ರೀತಿ ಹೆಚ್ಚಿಸಿರುವ ಗಳಿಗೆಯಿದು. ಸುಮ್ಮನೇ ಸಾಯಲು ಮನಸ್ಸಿಲ್ಲದ ನಮಗೆ ಹೆಜ್ಜೆ ಹೆಜ್ಜೆಗೆ ಅಪಾಯದ–ಅನುಮಾನದ ಬೀಜಗಳು ಎದುರಾಗುತ್ತಿವೆ.

ಸುತ್ತಲಿನ ಸಾವು–ಸಂಕಟ ನೋಡಿಯಾದರೂ ನಮಗೆ ಸಾರ್ಥಕ ಹೆಜ್ಜೆ ಇಡುವ ಮನಸ್ಸು ಮೂಡುವಂಥ ಕಾಲವಿದು. ನಾಳಿನ ಒಳ್ಳೆಯ ಕನಸು ಮೊಳೆಯಲು ಸೂಕ್ತ ಆತ್ಮಾವಲೋಕನದ, ಬೀಜೋಪಚಾರದ ಅಗತ್ಯವಿದೆ. ಇಷ್ಟು ವರ್ಷ ಬದುಕಿದಂತೆ ಕೊರೊನೋತ್ತರ ಕಾಲದಲ್ಲಿ ಅಸಾಧ್ಯ. ಆರೋಗ್ಯದ ಎಚ್ಚರದಲ್ಲಿ ಹೆಜ್ಜೆ ಹಾಕುವುದು ಅನಿವಾರ್ಯವೇ! ಹಾಗಂತ ಕುಸಿದು ಕುಳಿತಿರಬೇಕಿಲ್ಲ. ಇದ್ದಕ್ಕಿದ್ದಂತೆ ನಿಂತಲ್ಲೇ ನಿಲ್ಲುವ ಪ್ರಮೇಯ ಉದ್ಭವಿಸಿದ್ದರಿಂದ ಆರ್ಥಿಕ ಏರುಪೇರಿನ ಹೊಡೆತ ಬಿದ್ದಿದೆ. ಲೋಕಕ್ಕೆಲ್ಲ ಒದಗಿದ್ದು ನಮಗೂ ಸಿಕ್ಕಿದೆ. ಆದರೆ ಕಲಿತ ಪಾಠಗಳನ್ನು ಮರೆಯಲಾಗದ ಜಾಣ ನಡೆ ಮುಖ್ಯ. ಭಯದ ನೆರಳಲ್ಲಿ ಆರೋಗ್ಯ, ಆಹಾರ ಸಾಕ್ಷರತೆ ಪಡೆದ ಈ ಶತಮಾನದ ಮಹತ್ವದ ವರ್ಷ ಮುಗಿದಿದೆ. ಈ 2021ರಲ್ಲಿ ದಶಕದ ಬಳಿಕ ಜನಗಣತಿಯ ಎಣಿಕೆ ನಡೆಯಲಿದೆ. ಅದು ಎಂದಿನಂತೆ ಆರೋಗ್ಯ ಸೂಚ್ಯಂಕವನ್ನು ವೈದ್ಯರ ಸಂಖ್ಯೆ, ಆಸ್ಪತ್ರೆಗಳ ದೂರದ ಮೂಲಕ ಅಳೆದು ಹೇಳಬಹುದು. ಆಸ್ಪತ್ರೆ ಹತ್ತಿರದಲ್ಲಿರೋದು ಮುಖ್ಯವಲ್ಲ, ಆರೋಗ್ಯ ಹಾಳಾಗದಂಥ ಪರಿಸರದಲ್ಲಿ ಬದುಕುವುದು ಮುಖ್ಯ. ಶುದ್ಧ ನೀರು, ಕಷಾಯ ಸೇವನೆಯೊಂದಿಗೆ – ಅರಿಶಿನ, ಶುಂಠಿ, ನೆಲನೆಲ್ಲಿ, ಒಂದೆಲಗ, ಕಾಳುಮೆಣಸು, ಸೊಪ್ಪು, ತರಕಾರಿ, ಹಣ್ಣುಗಳ ನೆಲೆ ಬೆಲೆಯ ಅರಿವು ದೊರಕಿದೆ. ಒಳ್ಳೆಯದನ್ನು ಪಡೆಯಲು ಉತ್ತಮ ಪರಿಸರ ಉಳಿಸುವ ದೃಢಸಂಕಲ್ಪ ಬೇಕು. ಕೆರೆ, ಕಾಡು, ನದಿ, ಕೃಷಿ ಸೇರಿದಂತೆ ಊರ ಬೀದಿಗಳು ಚೆನ್ನಾಗಿರಲು ಮೊಟ್ಟಮೊದಲ ಹೆಜ್ಜೆ ನಮ್ಮ ಮನೆಯಿಂದ ಶುರುವಾಗಬೇಕು. ಕಂಡಲ್ಲಿ ಉಗುಳುವ, ಕಸ ಚೆಲ್ಲುವ, ತ್ಯಾಜ್ಯ ನೀರು ಬಿಡುವ ಘೋರ ತಪ್ಪು ಮತ್ತೆ ಮಾಡಬಾರದು. ಇಷ್ಟು ಕಾಲದ ಇಂಥ ಕೃತ್ಯಗಳು ನಮ್ಮ ಆರೋಗ್ಯ ಹೈರಾಣಾಗಿಸಿ ಜೀವಜಾಲದ ನೆಲೆಯಾದ ಭೂಮಿಯನ್ನು ತೀವ್ರ ನಿಗಾ ಘಟಕಕ್ಕೆ ನೂಕುತ್ತಿವೆ.

ನಿತ್ಯ ತಿಂದುಂಡು ಬದುಕುವ ದಿನಚರಿಗೆ ಶಿಸ್ತು ಬೇಕು. ಪರಿಶ್ರಮವಿಲ್ಲದಿದ್ದರೆ ಗೆಲುವು ಸಾಧ್ಯವಿಲ್ಲ. ನಮ್ಮನ್ನು ಎತ್ತಲು ಸರ್ಕಾರದ ಯೋಜನೆ ಇರಬಹುದು, ನೆರವಿಗೆ ಬರುವವರು ಸಿಗಬಹುದು. ಮುಖ್ಯ ನಮ್ಮ ಬದುಕು ಬದಲಿಸಬೇಕೆಂಬ ಕನಸು ಬೇಕಲ್ಲವೇ? ನಮ್ಮದೇ ಕೆಲಸದ ರೀತಿಗಳನ್ನು ನೋಡುತ್ತ ‘ಸ್ವಯಂ ಶೋಧ’ ನಡೆಯಬೇಕು. ಲೋಕದ ಕೆಟ್ಟದ್ದನ್ನು, ಕೆಟ್ಟವರನ್ನು, ಮೋಸವನ್ನು ಹುಡುಕಿ ಹುಡುಕಿ ನೋಡುತ್ತ ಎಣಿಸುತ್ತ ಹೀಗೆ ಸಾಗಿದರೆ, ಕುಳಿತರೆ ಆಯುಷ್ಯ ಕಳೆಯುತ್ತದೆ. ಸರಿಪಡಿಸುವುದು ಸಾಧ್ಯವಿಲ್ಲದ ಕೊರೊನೊಕ್ಕಿಂತ ಕೆಟ್ಟ ವೈರಸ್ ಸಮಾಜವನ್ನು ಕಾಡುತ್ತದೆ. ನಕಾರಾತ್ಮಕ ಸುದ್ದಿಯಲ್ಲಿ ರಂಜನೆ ಸಿಗುವಷ್ಟು ರಚನಾತ್ಮಕ ಮಾದರಿಗೆ ಸಿಗುವುದು ಕಡಿಮೆ. ಮಾರುಕಟ್ಟೆಗೆ ಹೋಗಿ ನೋಡಿದರೆ ಕೆಟ್ಟ ರಸ್ತೆಗಳನ್ನು

> **ಪ್ರತಿಯೊಂದು ಕ್ಷಣವೂ ಹೊಸ ಆರಂಭ.**
> **-ಟಿ.ಎಸ್. ಎಲಿಯಟ್**